ಅವನು ಮೆಲ್ಲಗೆ ಅವಳ ಬದಿಗೆ ಸರಿದು ಕುಳಿತ. ತೀರ ಸನಿಹದಲ್ಲಿ ಕೂತ. ಅವಳ ತಣ್ಣಗಿನ ದೇಹವನ್ನು ಇವನ ಬೆಚ್ಚಗಿನ ದೇಹ ಅಂಟಿಕೊಂಡಿತು.

ಅದೇ ಕಾಲಕ್ಕೆ ಒಮ್ಮೆಲೆ ಜೋರಾಗಿ ಗಾಳಿ ಬೀಸಿ ಮೊಂಬತ್ತಿ ಆರಿತು. ಗೋರಿಯಲ್ಲಿ ಗಾಢಾಂಧಕಾರ ಪಸರಿಸಿತು. ಕತ್ತಲೆ ಅವನ ಕಣ್ಣಿಗೆ ರಾಚಿತು. ಅವನಿಗೆ ಏನೂ ಕಾಣದಾಯಿತು. ಸನಿಹದ ತಣ್ಣಗಿನ ಸ್ಪರ್ಶದಿಂದ ಅವನ ಸಂವೇದನೆ ಮಾತ್ರ ಜಾಗ್ರತವಾಗುಳಿದಿತ್ತು. ಆ ಸ್ಪರ್ಶದಿಂದ ಅವನು ಅಸಹ್ಯಪಟ್ಟ. ತಟ್ಟನೆ ಅವನು ಬದಿಗೆ ಸರಿದ. ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿದ. ಮತ್ತೆ ತೆರೆದ. ಅವನ ಕಂಗಳು ಕ್ರಮೇಣ ಕತ್ತಲೆಗೆ ಹೊಂದಿಕೊಂಡವು. ಅಲ್ಪಸ್ವಲ್ಪ ಕಾಣಿಸಲಾರಂಭಿಸಿತು. ಬೆದರಿದವರಂತೆ ಅವನು ಎದುರಿಗೆ ನೋಡಲಾರಂಭಿಸಿದ.

ಬಹಳ ಹೊತ್ತು ಮುದುಡಿ ಕೂತಿದ್ದರಿಂದ ಕೈಕಾಲುಗಳು ಜಡಗೊಂಡವು. ದೇಹವೇ ಭಾರವಾದಂತೆನಿಸಿತು. ತಂಪುಗಾಳಿಯು ಹೆಚ್ಚೆಚ್ಚು ಮೈ ಘಾಸಿಗೊಳಿಸಲಾರಂಭಿಸಿತು. ಏನು ಮಾಡಲಿ? ಏಳಲೇ? ಹೋಗಿ ಬಿಡಲೇ?... ಹೆಣ್ಣದ ಬಟ್ಟೆ? ಬಿಟ್ಟು ಹೋಗಲೇ?

ಮುದುಡಿದ ಕಾಲನ್ನು ಅವನು ಮುಂಚಾಚಿದ. ಅದು ಅವಳನ್ನು ಸ್ಪರ್ಶಿಸಿತು. ಅದೇ ಸ್ಪರ್ಶ!

